

## ಹಳದಿ ಲೋಹ ಖರೀದಿಗೆ ಮುನ್ನ

**▲ ದರ ಏರಿಕೆಗೆ ಪೂರಕ ಅಂಶಗಳು**

- ಚಿನ್ನದ ದರ ಏರಿಕೆಗೆ ಪೂರಕವಾದ ಜಾಗತಿಕ ಬೆಳವಣಿಗೆಗಳು
- ಜಾಗತಿಕ ಮಟ್ಟದಲ್ಲಿನ ವಾಣಿಜ್ಯ ಕದನ, ಸ್ವಹಿತಾಸಕ್ತಿಗಳಿಂದಾಗುತ್ತಿರುವ ಸಂಘರ್ಷಗಳು.
- ಜಾಗತಿಕ ಆರ್ಥಿಕ ಬೆಳವಣಿಗೆ ಕುಸಿತ

**▼ ದರ ಇಳಿಕೆಗೆ ಪೂರಕ ಅಂಶಗಳು:**

- ತೈಲ ದರಗಳ ಏರಿಳಿತಗಳು
- ಜಾಗತಿಕ ಆರ್ಥಿಕತೆ ಸುಧಾರಣೆ
- ಇಟಿಎಫ್ ಹರಿವಿನ ನಕಾರಾತ್ಮಕತೆ



## ಚಿನ್ನದ ದರ ಏರಿಕೆಯ ಒಂದು ನೋಟ

(24 ಕ್ಯಾರಟ್‌ನ 10 ಗ್ರಾಮ್ ದರ) ಮಾಹಿತಿ: bankbazaar.com

| ಇಸವಿ | ಬೆಲೆ | ಇಸವಿ | ಬೆಲೆ |
|---|---|---|---|
| 1964 | ₹ 63.25 | 2011 | ₹ 26,400 |
| 1966 | ₹ 83.75 | 2015 | ₹ 26,343 |
| 1970 | ₹ 184 | 2016 | ₹ 28,623 |
| 1975 | ₹ 540 | 2017 | ₹ 29,667 |
| 1980 | ₹ 1330 | 2018 | ₹ 31,438 |
| 1985 | ₹ 2130 | 2019 | ₹ 35,220 |
| 1990 | ₹ 3200 | ಜ. 2020 | ₹ 38,977 |
| 1995 | ₹ 4680 | ಜೂ. 2020 | ₹ 47,980 |
| 2000 | ₹ 4400 | ಜು. 2, 2020 | ₹ 50,100 |
| 2005 | ₹ 7000 | ಜು. 18, 2020 | ₹ 49,250 |
| 2010 | ₹ 18,500 | ಸೆ. 15, 2020 | ₹ 53,450 |

ಬೆಲೆ ಹೆಚ್ಚಾಗಲು ಮುಖ್ಯ ಕಾರಣ. ಇಂಥ ಸಂದರ್ಭದಲ್ಲಿ ಬಹುತೇಕ ಜನರು ತಮ್ಮ ಹಣದ ಮೌಲ್ಯ ಉಳಿಸಿಕೊಳ್ಳಲು, ಒಂದು ಆಸ್ತಿಯಾಗಿ ಚಿನ್ನವನ್ನು ಖರೀದಿಸಬಹುದು' ಎಂದು ಹೂಡಿಕೆ ಮಾರ್ಗದರ್ಶಿ ಶಿವಾನಂದ ಪಂಡಿತ ಸಲಹೆ ನೀಡುತ್ತಾರೆ.

ಆರ್ಥಿಕ ಅನಿಶ್ಚಿತತೆ ಮತ್ತು ಹಣದುಬ್ಬರವನ್ನು ನಿಭಾಯಿಸಲು ದೀರ್ಘಕಾಲದ ಹೂಡಿಕೆಯಾಗಿ ಚಿನ್ನವನ್ನು ನೆಚ್ಚಿಕೊಳ್ಳಬಹುದು.

### 5 ವರ್ಷಗಳಲ್ಲಿ ದುಪ್ಪಟ್ಟು

ಈ ವರ್ಷದ ಜುಲೈ 9ರಂದು 10 ಗ್ರಾಮ್ ಚಿನ್ನದ ದರ 49,175 ರೂಪಾಯಿ ಇತ್ತು. 2015ರ ಆಗಸ್ಟ್ 6ರಂದು 24,562 ರೂಪಾಯಿ ಇತ್ತು. ಅಂದರೆ, ಕಳೆದ ಐದು ವರ್ಷಗಳಲ್ಲಿ ಚಿನ್ನದ ದರ ಬಹುತೇಕ ದುಪ್ಪಟ್ಟಾಗಿದೆ.

ದೇಶದ ಚಿನ್ನದ ಬೇಡಿಕೆ ಪೂರೈಸಲು ಆಮದು ಅನಿವಾರ್ಯವಾಗಿದ್ದು, ಅರ್ಥ ವ್ಯವಸ್ಥೆ ಮೇಲೆ ಭಾರೀ ಹೊಡೆತ ಬೀಳುತ್ತಿದೆ. ಜಾಗತಿಕ ಮಟ್ಟದಲ್ಲಿ ಬಂಗಾರದ ಬಳಕೆಯಲ್ಲಿ ಚೀನಾಕ್ಕೆ ಪ್ರಥಮ ಸ್ಥಾನ. ಭಾರತಕ್ಕೆ ಎರಡನೇ ಸ್ಥಾನ. ದೇಶಕ್ಕೆ ಚಿನ್ನ ಒದಗಿಸುವಲ್ಲಿ ನಮ್ಮ ಗಣಿಗಳ ಪಾಲು ತೀರಾ ಕಡಿಮೆ. 2018–19ರಲ್ಲಿ ಭಾರತವು ಕೇವಲ 1,664 ಕೆ.ಜಿ ಚಿನ್ನವನ್ನಷ್ಟೇ ಉತ್ಪಾದಿಸಲು ಸಾಧ್ಯವಾಗಿದೆ. ಹೀಗಾಗಿ, ದೇಶಕ್ಕೆ ಬೇಕಾಗುವ ಶೇ.99ರಷ್ಟು ಚಿನ್ನವನ್ನು ಆಮದು ಮಾಡಿಕೊಳ್ಳುತ್ತೇವೆ. ಅದರಲ್ಲೂ ಶೇ.80ರಷ್ಟು ಚಿನ್ನಕ್ಕೆ ಭಾರತವು ದಕ್ಷಿಣ ಆಫ್ರಿಕಾವನ್ನು ಅವಲಂಬಿಸಿದೆ. ರೀಸೈಕಲ್ ಆಗುವ ಚಿನ್ನದ ಪಾಲೂ ಇದೆ. ಪೂರೈಕೆಯ ಕೊರತೆ ಮತ್ತು ಚಿನ್ನಕ್ಕಿರುವ ಬೇಡಿಕೆಯೇ ಅದರ ದರ ಏರಿಕೆಗೆ ಮೂಲ ಕಾರಣ.

### ದರ ಏರಿಕೆಯ ಸ್ಪೀಡ್‌ಗೆ ಬ್ರೇಕ್ ಬಿದ್ದಿದೆಯೇ?

ಚಿನ್ನದ ದರ ಏರಿಕೆಯ ಸ್ಪೀಡ್ ತುಸು ತಗ್ಗಿದೆ. ಜೂನ್–ಜುಲೈ ಅವಧಿಯಲ್ಲಿನ ಸ್ಪೀಡ್ ಮುಂದುವರಿದಿದ್ದರೆ, ಸೆಪ್ಟೆಂಬರ್ ಹೊತ್ತಿಗೆ ಚಿನ್ನದ ದರ 60 ಸಾವಿರ ರೂಪಾಯಿ ಮುಟ್ಟುತ್ತಿತ್ತು. ಕಳೆದೊಂದು ತಿಂಗಳಿಂದ ಏರಿಳಿತದ ಆಟ ಮಾರುಕಟ್ಟೆಯಲ್ಲಿದೆ. ಒಂದು ದಿನ ಇಳಿದು, ಮತ್ತೊಂದು ದಿನ ಏರುತ್ತಿದೆ.